# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ / ಸಂಸ್ಥೆಗಳನ್ನು ಪುನರ್‌ರಚಿಸುವ ಕುರಿತು.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಎಲ್‌ಡಿ 142 ಇಟಿಐ 2007, ದಿ: 02-04-2008
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 164 ಸಉಸೇ 2016, ದಿ: 24-09-2016
3) ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 152 ಕೈತಇ 2017, ದಿ: 20-04-2017
4) ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 49 ಕೈತಕಿ 2017(ಭಾ-1), ದಿ:08-05-2017
5) ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 284 ಕೈತಇ 2017, ದಿ: 26-09-2017
6) ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 459 ಕೈತಕಿ 2017, ದಿ: 27-12-2017
7) ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 51 ಕೌಗುಇ 2017, ದಿ: 01-02-2019

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರನ್ವಯ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆ 1956 ರನ್ವಯ ಆರ್ಟಿಕಲ್ಸ್ ಆಫ್ ಅಸೋಷಿಯೆಷನ್ ನೊಂದಿಗೆ ಸ್ಥಾಪಿಸಿ ಅಲ್ಪಾವಧಿ ವೃತ್ತಿಪರ ಕೌಶಲ್ಯ ತರಬೇತಿ ನೀಡಲು ಹಾಗೂ ಇನ್ನಿತರ ಉದ್ದೇಶಗಳನ್ನು ಈಡೇರಿಸಲು ಆದೇಶ ಹೊರಡಿಸಲಾಗಿತ್ತು. ಕ್ರಮ ಸಂಖ್ಯೆ (2)ರನ್ವಯ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಒಂದೆಡೆ ತರುವ ಉದ್ದೇಶದಿಂದ ಹೊಸದಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲಾಯಿತು. ಕ್ರಮ ಸಂಖ್ಯೆ (3)ರನ್ವಯ ಅಲ್ಪಾವಧಿ ಕೌಶಲ್ಯ ತರಬೇತಿಯನ್ನು ಮಿಷನ್ ಮೋಡ್ ಮೂಲಕ ಅನುಷ್ಠಾನಗೊಳಿಸಲು ಅವುಗಳ ಉದ್ದೇಶ ಮತ್ತು ಪ್ರಕಾರ್ಯಗಳೊಂದಿಗೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೌಶಲ್ಯ ಮಿಷನ್‌ಗಳನ್ನು ರಚಿಸಲಾಯಿತು. ಕ್ರಮ ಸಂಖ್ಯೆ (4)ರನ್ವಯ ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಗಳನ್ನು ಹೊರಡಿಸಲಾಯಿತು. ಕ್ರಮ ಸಂಖ್ಯೆ (5)ರನ್ವಯ ಕೌಶಲ್ಯ ಮಿಷನ್ ಘಟಕವನ್ನು ಸ್ಥಾಪಿಸಿ ಅಧಿಕಾರಿ ಮತ್ತು ಪೂರಕ ಸಿಬ್ಬಂಧಿಯನ್ನು ಸೃಜಿಸಿ ಆದೇಶ ಹೊರಡಿಸಲಾಗಿದೆ. ಕ್ರಮ ಸಂಖ್ಯೆ (6)ರನ್ವಯ ಕೆ.ವಿ.ಟಿ.ಎಸ್.ಡಿ.ಸಿ.ಯನ್ನು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ.) ಎಂದು ಮರುನಾಮಕರಣಗೊಳಿಸಲಾಗಿದೆ. ಕ್ರಮ ಸಂಖ್ಯೆ (7)ರನ್ವಯ ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸುವ ತರಬೇತಿ ಸಂಸ್ಥೆಗಳ/ಕೇಂದ್ರಗಳ ನೋಂದಾಣಿ, ಮಾನ್ಯತೆ ಮತ್ತು ಮೌಲ್ಯಮಾಪನ ಮಾಡುವ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಎಲ್ಲಾ ಕೌಶಲ್ಯ ಚಟುವಟಿಕೆಗಳನ್ನು ಒಂದೆಡೆ ತರುವ ಸಲುವಾಗಿ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ರಚನೆಯನ್ನು ಪುನರ್ ವ್ಯಾಖ್ಯಾನಿಸಲು ಮತ್ತು ಪುನರ್‌ರಚಿಸಲು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ಪ್ರಕರಣ ಸಂಖ್ಯೆ: ಸಿ/714/2019, ದಿನಾಂಕ: 12-12-2019ರ ಸಚಿವ ಸಂಪುಟದ ಸಭೆಯಲ್ಲಿ ನಿರ್ದೇಶಕರು ಕೌಶಲ್ಯ ಮಿಷನ್, ಕೆ.ವಿ.ಟಿ.ಎಸ್.ಡಿ.ಸಿ., ವಿದ್ಯಾಪೀಠ, ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡುವ ಮೋಕ್ಷಗುಂಡಂ ವಿಶ್ವೇಶ್ವರಯ್ಯ ತರಬೇತಿ ಕೇಂದ್ರ, ಕೌಶಲ್ಯ ಶಾಲೆ ಮತ್ತು ಅಂತರರಾಷ್ಟ್ರೀಯ ವಲಸಿಗರ ಕೇಂದ್ರ - ಕರ್ನಾಟಕ ಕೈಗೊಳ್ಳುತ್ತಿರುವ ಎಲ್ಲಾ ಅಲ್ಪಾವಧಿ ಕೌಶಲ್ಯ ಚಟುವಟಿಕೆಗಳನ್ನು ಒಂದೆಡೆ ತಂದು ಕೇಂದ್ರ ಸರ್ಕಾರದ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮದ ಮಾದರಿಯಲ್ಲಿ ಈಗ ಅಸ್ತಿತ್ವದಲ್ಲಿರುವ ಒಂದೆ ಏಜೆನ್ಸಿಯಾದ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಲು ಸಚಿವ ಸಂಪುಟದ ಸಭೆಯಲ್ಲಿ ಅನುಮೋದಿಸಲಾಗಿದೆ.

ಸರ್ಕಾರವು ಈ ವಿಷಯವನ್ನು ಪರಿಶೀಲಿಸಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ನಿರ್ದೇಶಕರು, ಕೌಶಲ್ಯ ಮಿಷನ್ ಹುದ್ದೆಯನ್ನು ಮಾತ್ರ ರದ್ದುಗೊಳಿಸಿ ಕೌಶಲ್ಯ ಮಿಷನ್‌ನ ಎಲ್ಲಾ ಪೂರಕ ಸಿಬ್ಬಂದಿ, ಕೆ.ವಿ.ಟಿ.ಎಸ್.ಡಿ.ಸಿ. ವಿದ್ಯಾಪೀಠ, ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡುವ ಮೋಕ್ಷಗುಂಡಂ ವಿಶ್ವೇಶ್ವರಯ್ಯ ತರಬೇತಿ ಕೇಂದ್ರ, ಮತ್ತು ಕೌಶಲ್ಯ ಶಾಲೆಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಒಟ್ಟುಗೂಡಿಸಿ ಇವುಗಳನ್ನು ಏಕೈಕ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸಬೇಕಾಗಿದೆ. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ನೋಂದಾಣಿ, ಸ್ವರೂಪ, ಉದ್ದೇಶ ಮತ್ತು ಪ್ರಕಾರ್ಯಗಳನ್ನು ಪುನರ್ ವ್ಯಾಖ್ಯಾನಿಸಬೇಕಾಗಿದೆ. ಪುನರ್ ವ್ಯಾಖ್ಯಾನಿಸುವಾಗ ಅನುಬಂಧ-1 ರಲ್ಲಿ ನೀಡಿರುವ ಅಂಶಗಳನ್ನು ಪರಿಗಣಿಸುವುದು. ಮುಂದುವರೆದು, ಕೆ.ವಿ.ಟಿ.ಎಸ್.ಡಿ.ಸಿ.ಯನ್ನು ಕೆ.ಎಸ್.ಡಿ.ಸಿ. ಎಂದು ಮರುನಾಮಕರಣಗೊಳಿಸಿ ಎಲ್ಲಾ ಅಲ್ಪಾವಧಿ ಕೌಶಲ್ಯ ತರಬೇತಿ ಹಾಗೂ ಇನ್ನಿತರ ಪ್ರಕಾರ್ಯಗಳನ್ನು ಅನುಷ್ಠಾನಗೊಳಿಸಲು ಬೇಕಾದ ಹುದ್ದೆಗಳನ್ನು ಕೌಶಲ್ಯ ಮಿಷನ್ ಮತ್ತು ಕೆ.ವಿ.ಟಿ.ಎಸ್.ಡಿ.ಸಿ. ಹಾಗೂ ಇತರ ಸಂಸ್ಥೆಗಳಿಂದ ಪುನರ್ ಸಂಘಟಿಸಿ ನಿಗಮದ ಹುದ್ದೆಗಳಿಗೆ ನೀಡಿದ ಸೂಕ್ತ ಪದನಾಮ ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಇದರನ್ವಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಬೇಕಾಗಿದೆ. ಸದರಿ ಪ್ರಕ್ರಿಯೆಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 79 ಕೌಗುಇ 2019, ಬೆಂಗಳೂರು,</u>

<u>ದಿನಾಂಕ: 10-01-2020</u>

ಕೌಶಲ್ಯ ಮಿಷನ್‌ನಲ್ಲಿ ಮಂಜೂರಾಗಿರುವ ಎಲ್ಲಾ ಪೂರಕ ಸಿಬ್ಬಂದಿ, ಕೆ.ವಿ.ಟಿ.ಎಸ್.ಡಿ.ಸಿ. ವಿದ್ಯಾಪೀಠ, ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡುವ ಮೋಕ್ಷಗುಂಡಂ ವಿಶ್ವೇಶ್ವರಯ್ಯ ತರಬೇತಿ ಕೇಂದ್ರ ಮತ್ತು ಕೌಶಲ್ಯ ಶಾಲೆಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಒಟ್ಟುಗೂಡಿಸಿ ಇವುಗಳನ್ನು ಏಕೈಕ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸಲು ಸೂಚಿಸಿದೆ. ಕೆ.ವಿ.ಟಿ.ಎಸ್.ಡಿ.ಸಿ.ಯನ್ನು ಕೆ.ಎಸ್.ಡಿ.ಸಿ. ಎಂದು ಮರುನಾಮಕರಣಗೊಳಿಸಿ ಈಗಾಗಲೇ ಆದೇಶ ಹೊರಡಿಸಿದೆ. ಮುಂದುವರೆದು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ನೋಂದಾಣಿ, ಸ್ವರೂಪ, ಉದ್ದೇಶ ಮತ್ತು ಪ್ರಕಾರ್ಯಗಳನ್ನು ಪುನರ್ ವ್ಯಾಖ್ಯಾನಿಸಿ ಎಲ್ಲಾ ಅಲ್ಪಾವಧಿ ಕೌಶಲ್ಯ ತರಬೇತಿ ಹಾಗೂ ಇನ್ನಿತರ ಪ್ರಕಾರ್ಯಗಳನ್ನು ಈ ಆದೇಶದ ಅನುಬಂಧ-1 ರಲ್ಲಿ ನೀಡಿರುವ ಅಂಶಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಹುದ್ದೆಗಳನ್ನು ಕೌಶಲ್ಯ ಮಿಷನ್ ಮತ್ತು ಕೆ.ವಿ.ಟಿ.ಎಸ್.ಡಿ.ಸಿ. ಹಾಗೂ ಇತರ ಸಂಸ್ಥೆಗಳಿಂದ ಪುನರ್ ಸಂಘಟಿಸಿ ನಿಗಮದ ಹುದ್ದೆಗಳಿಗೆ ನೀಡಿದ ಸೂಕ್ತ ಪದನಾಮ ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಇದರನ್ವಯ ಸದರಿ ಪ್ರಕ್ರಿಯೆಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಈ ಮೂಲಕ ಆದೇಶಿಸಿದೆ. ಮುಂದುವರೆದು, ನಿರ್ದೇಶಕರು, ಕೌಶಲ್ಯ ಮಿಷನ್ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಪ್ರಕರಣ ಸಂಖ್ಯೆ: ಸಿ/714/2019, ದಿನಾಂಕ: 12-12-2019ರ ಸಚಿವ ಸಂಪುಟದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

10/4/2020
(ಸಿದ್ದಿಕ್ ಪಾಷ)
ಸರ್ಕಾರದ ಉಪ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ- ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 100 ಪ್ರತಿಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಒದಗಿಸಲು.
2. ಮಹಾಲೇಖಪಾಲರು, (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಅ.ಸು. ಇಲಾಖೆ (ಆಡಳಿತ ಸುಧಾರಣೆ).
7. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಕಾರ್ಯದರ್ಶಿಗಳು, ಸಿ.ಅ.ಸು. ಇಲಾಖೆ.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಎಲ್ಲಾ ಇಲಾಖೆಗಳು.
10. ಅಧ್ಯಕ್ಷರು, ಕೆ.ಎಸ್.ಡಿ.ಎ., ಬೆಂಗಳೂರು
11. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ
12. ನಿರ್ದೇಶಕರು, ಕೌಶಲ್ಯ ಮಿಷನ್
13. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ
14. ವ್ಯವಸ್ಥಾಪಕ ನಿರ್ದೇಶಕರು, ಕೆ.ವಿ.ಟಿ.ಎಸ್.ಡಿ.ಸಿ. (ಕೆ.ಎಸ್.ಡಿ.ಸಿ.), ಬೆಂಗಳೂರು
15. ಎಲ್ಲಾ ಸಮಾಲೋಚಕರುಗಳು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
16. ವ್ಯವಸ್ಥಾಪಕ ನಿರ್ದೇಶಕರು, ಜಿಟಿಟಿಸಿ, ಬೆಂಗಳೂರು
17. ನಿರ್ದೇಶಕರು, ಸಿಡಾಕ್ ಧಾರವಾಡ
18. ಮಿಷನ್ ನಿರ್ದೇಶಕರು, ಕೆಎಸ್‌ಎಲ್‌ಆರ್‌ಪಿಎಸ್, ಬೆಂಗಳೂರು
19. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
20. ಮಿಷನ್ ನಿರ್ದೇಶಕರು, ಡೇ ನಲ್ಮ್, ಬೆಂಗಳೂರು
21. ಎಲ್ಲಾ ಇಲಾಖೆಗಳ ಮುಖ್ಯಸ್ಥರು.
22. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಕೌಶಲ್ಯ ಮಿಷನ್
23. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
24. ಎಲ್ಲಾ ಜಿಲ್ಲೆಯ ಜಿಲ್ಲಾಕೌಶಲ್ಯ ಅಧಿಕಾರಿಗಳು
25. ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಸರ್ಕಾರಿ ಆದೇಶ ಸಂಖ್ಯೆ: ಕೌಉಬಜೀಇ 79 ಕೌಗುಇ 2019, ಬೆಂಗಳೂರು,

ದಿನಾಂಕ: 10-01-2020ರ ಅನುಬಂಧ – 1

## ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ರಚಿಸಲು ಟಿಪ್ಪಣಿ

### ಅ. ತುರ್ತಾಗಿ ವಹಿಸಬೇಕಾದ ಕ್ರಮಗಳು.

1. ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಅಧಿಕಾರಯುಕ್ತ ಸಮಿತಿಯ ನಿರ್ಣಯದಂತೆ ಕೆ.ವಿ.ಟಿ.ಎಸ್.ಡಿ.ಸಿ.ಯನ್ನು ಕೆ.ಎಸ್.ಡಿ.ಸಿ. ಎಂದು ಮರುನಾಮಕರಣಗೊಳಿಸಬೇಕಾಗಿದೆ.
2. ಕೆ.ಎಸ್.ಡಿ.ಸಿ.ಯನ್ನು ಕಂಪನಿ ಅಧಿನಿಯಮದಡಿ ಕಂಪನಿಗಳ ನಿಬಂಧಕರೊಂದಿಗೆ (ROC) ನೋಂದಾಯಿಸಲು ಈ ಕೆಳಕಂಡ ಕ್ರಮಗಳನ್ನು ವಹಿಸಬೇಕಾಗಿದೆ.
   ಅ. ಕೆ.ವಿ.ಟಿ.ಎಸ್.ಡಿ.ಸಿ.ಯ ಆಡಳಿತ ಮಂಡಳಿಯನ್ನು ನೋಂದಾಯಿಸಲು ಠರಾವು ಮಾಡಬೇಕಾಗಿದೆ.
   ಆ. 2013-14 ರಿಂದ 2015-16ರವರೆಗೆ ಮೂರು ಆರ್ಥಿಕ ವರ್ಷಗಳ ಲೆಕ್ಕಪತ್ರ ವಿವರಗಳನ್ನು ಕಂಪನಿಗಳ ನಿಬಂಧಕರಿಗೆ (ROC) ಸಲ್ಲಿಸಬೇಕಾಗಿದೆ.
3. ಹಿಂದಿನ ಅಧ್ಯಕ್ಷರು 2013-14ನೇ ಸಾಲಿನ ಲೆಕ್ಕಪತ್ರ ಅಥಾವೆ ಪಟ್ಟಿಗೆ ಸಹಿ ಮಾಡಿರುವುದಿಲ್ಲ. ಪರ್ಯಾಯವಾಗಿ ಇಬ್ಬರು ನಿರ್ದೇಶಕರುಗಳ ಸಹಿಯನ್ನೊಳಗೊಂಡ ಅಥಾವೆ ಪಟ್ಟಿಕೆ ಸಲ್ಲಿಸಬಹುದಾಗಿದೆ. ಒಬ್ಬ ನಿರ್ದೇಶಕರಾದ ಶ್ರೀ ರಾಮನಾಥನ್‌ರವರು 2013-14ರಲ್ಲಿ MoD ಖಾತೆಯಲ್ಲಿ ಸಂದಾಯವಾದ ಕಡಿಮೆ ಬಡ್ಡಿಗೆ ಸ್ಪಷ್ಟೀಕರಣ ನೀಡುವ ಷರತ್ತಿಗೊಳಪಟ್ಟು ಸಹಿ ಮಾಡಲು ಒಪ್ಪಿರುವರು. ವ್ಯವಸ್ಥಾಪಕ ನಿರ್ದೇಶಕರು, ಕೆ.ವಿ.ಟಿ.ಎಸ್.ಡಿ.ಸಿ. ರವರು ಬ್ಯಾಂಕಿನಿಂದ ಈ ಕುರಿತು ಸ್ಪಷ್ಟೀಕರಣವನ್ನು ಪಡೆದು ಮೂರು ವರ್ಷಗಳ ಲೆಕ್ಕ ಪತ್ರಗಳನ್ನು ಕಂಪನಿಗಳ ನಿಬಂಧಕರಿಗೆ (ROC) ಸಲ್ಲಿಸಬೇಕಾಗಿದೆ.
4. ಮೆಮೋರೆಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಷಿಯೆಷನ್‌ನ ಕಲಂ 32(a) ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು ಕೆ.ವಿ.ಟಿ.ಎಸ್.ಡಿ.ಸಿ.ಯ ಅಧ್ಯಕ್ಷರಾಗಿರುವರು. ಕೆ.ಎಸ್.ಡಿ.ಸಿ.ಯಾಗಿ ಕಂಪನಿಗಳ ನಿಬಂಧಕರೊಂದಿಗೆ (ROC) ನೋಂದಾಯಿಸುವಾಗ ಇದನ್ನು ಮುಂದುವರೆಸುವುದು.

### ಆ. ವಿಲೀನಗೊಳಿಸಿದ ನಂತರ ಕೆ.ಎಸ್.ಡಿ.ಸಿ.ಯ ಸ್ವರೂಪ.

1. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಶಾಖೆಗೆ ಒಬ್ಬ ಶೀಘ್ರಲಿಪಿಗಾರ, ಬೆರಳಚ್ಚುಗಾರ, ಪ್ರಥಮ ದರ್ಜೆ ಸಹಾಯಕ, 2 ಗ್ರೂಪ್-ಡಿ ಮತ್ತು 1 ವಾಹನ ಚಾಲಕನನ್ನು ಕೌಶಲ್ಯ ಮಿಷನ್‌ನ ಹುದ್ದೆಗಳಿಂದ ನಿಯೋಜಿಸುವುದು. ಒಬ್ಬ ಡಿ.ಇ.ಓ/ಸಹಾಯಕ/ಹೌಸ್‌ಕೀಪಿಂಗ್/ಸೆಕ್ಯೂರಿಟಿ ಗಳನ್ನು ಕೆ.ವಿ.ಟಿ.ಎಸ್.ಸಿ.ಯಿಂದ ನಿಯೋಜಿಸುವುದು ಮತ್ತು ಇನ್ನೊಬ್ಬ ವಾಹನ ಚಾಲಕನ್ನು ವಿದ್ಯಾಪೀಠದಿಂದ ನಿಯೋಜಿಸುವುದು.
2. ಸಚಿವ ಸಂಪುಟದ ನಿರ್ಣಯದನ್ವಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ನಿರ್ದೇಶಕರು, ಕೌಶಲ್ಯ ಮಿಷನ್ ಹುದ್ದೆಯನ್ನು ಮಾತ್ರ ರದ್ದುಗೊಳಿಸುವುದು. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಡಿ.ಸಿ. ಇವರ ಅಧೀನದಲ್ಲಿ ಕಾರ್ಯಕಾರಿ ನಿರ್ದೇಶಕರು-1, ಕಾರ್ಯಕಾರಿ ನಿರ್ದೇಶಕರು-2 ಮತ್ತು ಕಾರ್ಯಕಾರಿ

ನಿರ್ದೇಶಕರು-3 ಎಂದು ಒಟ್ಟು ಮೂರು ಜಂಟಿ ನಿರ್ದೇಶಕ ವೃಂದದ ಅಧಿಕಾರಿಗಳನ್ನು ನೀಡುವುದು ಆಡಳಿತಾತ್ಮಕ ದೃಷ್ಟಿಯಿಂದ ಸೂಕ್ತವಾಗಿದೆ. ಸದ್ಯಕ್ಕೆ ಕೆ.ವಿ.ಟಿ.ಎಸ್.ಡಿ.ಸಿ.ಯಲ್ಲಿ ಜಂಟಿ ನಿರ್ದೇಶಕರ ವೃಂದದಲ್ಲಿ ಕಾರ್ಯಕಾರಿ ನಿರ್ದೇಶಕರ ಒಂದೆ ಹುದ್ದೆ ಲಭ್ಯವಿದ್ದು ಇನ್ನೆರಡು ಜಂಟಿ ನಿರ್ದೇಶಕ ವೃಂದದ ಕಾರ್ಯಕಾರಿ ನಿರ್ದೇಶಕರುಗಳನ್ನು ನೀಡಿ ಅವರುಗಳು ವಹಿಸಬೇಕಾದ ಕಾರ್ಯಚಟುವಟಿಕೆಗಳನ್ನು ನೀಡಲಾಗಿದೆ.

3. ಕಾರ್ಯಕಾರಿ ನಿರ್ದೇಶಕರುಗಳಿಗೆ ವಹಿಸಲಾದ ಕಾರ್ಯಚಟುವಟಿಕೆಗಳು ಈ ಕೆಳಕಂಡಂತಿದೆ.

| Proposed Designation | Work allocation proposed | Resources available |
|---|---|---|
| **Executive Director – 1 in the cadre of Joint Director (Existing)** | International Migration Centres-Karnataka (IMC-K) | A consultant appointed for RAK and other consultants i.e. PAC-PMU and RAD will also support IMC-K for PDO training and Overseas Employment. |
| | Recruitment Agency of Karnataka (RAK) | 1 GM, 1 AM, 3 Admin Asst., 2 Trainer cum Counsellor and 1 IT Consultant will render support to ED-1 |
| | Technical Internship with other countries with PAC staff | 9 resources under PMU and 8 resources under RAD are working presently will support ED-1 |
| | Standards (Content curriculum etc.) to render support to KSDA | |
| | CSR / Media Team (Publication) | |
| | Recognition of Prior Learning (RPL) | |
| **Executive Director – 2 in the cadre of Joint Director (To be redeployed from E&T)** | CMKKY | |
| | Management Information System (MIS) Kaushalkar.com | |
| | Accreditation of TPs and TCs | |
| | PMKVY – CSSM Including Special projects with PMU of PMKVY | 1 Team lead (Vacant), 2 Monitors, 2 Analysts, 2 Data Analysts and 2 Office Assistants will help ED-2 for PMKVY |
| **Executive Director – 3 in the cadre of Joint Director (To be redeployed from E&T)** | Assessment and Certification | |
| | Market research and Design team for skilling | |

| | | |
|---|---|---|
| | NAPS only for optional trades | 1 Project Manager and 4 Deputy Managers of YES-PMU sanctioned under UNDP will support for co-ordination of all District YES Kendras. In addition for trade Apprenticeship, the Apprenticeship cell to co-ordinate with YES Centres in the Districts. |
| | YES Centres | |
| | Training of Trainers | |
| | Kaushlaya Shale | 1 Co-ordinator and 1 Jr. Assistant will support ED-3 |
| | Mokshagundam Institute | 1 Director (DGM Cadre) |
| | Vidyapeethas all other trainings | 1 Anuchara (IT Asst.) out of 18 SDAs 6 are in Skill Mission rest are in District Skill Mission |
| | School and College Education for skilling | |

ಮೇಲೆ ತಿಳಿಸಿರುವ ಕಾರ್ಯಕಾರಿ ನಿರ್ದೇಶಕರುಗಳಿಗೆ ಕೌಶಲ್ಯ ಮಿಷನ್‌ನ ಉಪನಿರ್ದೇಶಕರ / ಕೆ.ವಿ.ಟಿ.ಎಸ್.ಡಿ.ಸಿ. ನಲ್ಲಿನ ಉಪನಿರ್ದೇಶಕರ ವೃಂದದಲ್ಲಿರುವ ಉಪ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಹಾಗೂ ಆಡಳಿತ ಮತ್ತು ಇತರ ಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ನಿಗಮದ ಮೂರು ವಿಭಾಗದ ಕಾರ್ಯಕಾರಿ ನಿರ್ದೇಶಕರುಗಳು ಅವರ ಶಾಖೆಗೆ ಸಂಬಂಧಿಸಿದ ಆಡಳಿತ ವಿಷಯಗಳನ್ನು ಅವರೆ ನಿರ್ವಹಿಸುವುದು.

4. ಈ ಹಿಂದೆ ಕೌಶಲ್ಯ ಮಿಷನ್‌ನ ಲೆಕ್ಕಪತ್ರ ಶಾಖೆಗೆ ಮಂಜೂರಾದ ಹುದ್ದೆಗಳಾದ ಜಂಟಿ ನಿಯಂತ್ರಕರ ಹಾಗೂ ಲೆಕ್ಕಾಧಿಕಾರಿ / ಲೆಕ್ಕ ಅಧೀಕ್ಷಕ / ಇನ್ನಿತರ ಸಹಾಯಕ ಸಿಬ್ಬಂದಿಗಳನ್ನು ಯಾವುದೇ ಬದಲಾವಣೆ ಇಲ್ಲದೆ ಮುಂದುವರೆಸಲಾಗಿದೆ.
5. ಕೆ.ಎಸ್.ಡಿ.ಸಿ.ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಕೌಶಲ್ಯ ಮಿಷನ್ / ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ / ಎನ್.ಆರ್.ಎಲ್.ಎಂ. / ಎನ್.ಯು.ಎಲ್.ಎಂ. / ಜಿಟಿಟಿಸಿ / ಸಿಡಾಕ್‌ನಲ್ಲಿ ಅನುಮೋದಿತ ಹುದ್ದೆಗಳಿಗೆ ಅವಕಾಶ ಕಲ್ಪಿಸುವುದರ ಮೂಲಕ ರೂಪಿಸುವುದು. ಸರ್ಕಾರದ ಅಧಿಕಾರಿಗಳನ್ನು ಕೆ.ಜಿ.ಟಿ.ಟಿ.ಐ.ಗೆ ಸಹ ನಿಯೋಜಿಸಲು ಅವಕಾಶ ಕಲ್ಪಿಸುವುದು.
6. ಕೌಶಲ್ಯ ಮಿಷನ್, ಕೆ.ವಿ.ಟಿ.ಎಸ್.ಡಿ.ಸಿ., ವಿದ್ಯಾಪೀಠ, ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡುವ ಮೋಕ್ಷಗುಂಡಂ ವಿಶ್ವೇಶ್ವರಯ್ಯ ತರಬೇತಿ ಕೇಂದ್ರ ಮತ್ತು ಕೌಶಲ್ಯ ಶಾಲೆಗಳಿಗೆ ಮಂಜೂರಾಗಿರುವ ಎಲ್ಲಾ ಹುದ್ದೆಗಳನ್ನು 3 ಕಾರ್ಯಕಾರಿ ನಿರ್ದೇಶಕರುಗಳಿಗೆ ವಹಿಸಲಾದ ಕಾರ್ಯಚಟುವಟಿಕೆಗಳನುಸಾರ ಅನುಷ್ಠಾನಗೊಳಿಸಲು ಮರುಹಂಚಿಕೆ ಮಾಡಲಾಗಿದೆ. ಸದರಿ ಮರುಹಂಚಿಕೆಯ ವಿವರಗಳನ್ನು ಅನುಬಂಧ-2 ರಲ್ಲಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 79 ಕೌಉಇ 2019, ಬೆಂಗಳೂರು, ದಿನಾಂಕ: 10-01-2020ರ ಅನುಬಂಧ-2

## Managing Director – KSDC & Director – State Skill Mission and Divisions of KSDC

| Sl No. | Proposed Designation | Work allocation proposed | Supporting Officers From | | | | Supporting Staff From | | | | Supporting Officers From | | | | | |
|---|---|---|---|---|---|---|---|---|---|---|---|---|---|---|---|---|
| | | | No of Posts | Skill Mission | No of Posts | KVTSDC | No of Posts | Skill Mission | No of Posts | KVTSDC | No of Posts | Vidyapeethas | No of Posts | Mokshagundam | No of Posts | Kaushalya Shale |
| 1 | Managing Director – KSDC | Overall monitoring of KSDC activities | | | 1 | MD, IAS | 1 | Stenographer | | | 1 | Driver | | | | |
| | | | | | | | 1 | Typist | | | | | | | | |
| | | | | | | | 1 | FDA | 1 | DEO / Assistant | | | | | | |
| | | | | | | | 2 | Group-D | 1 | Housekeeping / Security | | | | | | |
| | | | | | | | 1 | Driver | | | | | | | | |
| 2 | Executive Director – 1 in the cadre of Joint Director (Existing) | IMC-K | 1 | AGM of the cadre of Asst. Dir. | 1 | ED of the cadre of JD | 1 | Typist | 2 | Project Managers | | | | | | |
| | | RAK | | | 1 | DGM of the cadre of DD | 1 | Group-D | 4 | Program co-ordinator | | | | | | |
| | | Technical Internship with other countries with PAC staff | | | | | | | 1 | Career Counsellors | | | | | | |
| | | Standards (Content curriculum etc.) to render support to KSDA | | | | | | | 2 | DEO / Assistants | | | | | | |
| | | CSR / Media Team (Publication) | | | | | | | 3 | Housekeeping / Security | | | | | | |
| | | RPL | | | | | | | 5 | Driver | | | | | | |
| 3 | Executive Director – 2 In the cadre of Joint Director (To be redeployed from E&T) | CMKKY | 1 | DGM of the cadre of DD | | | 1 | Office Superintendent | 2 | Project Managers | | | | | | |
| | | Management Information System (MIS) Kaushalkar.com | 1 | AGM of the cadre of Asst. Dir. | | | 2 | SDA | 3 | Program co-ordinator | | | | | | |
| | | | | | | | | | 1 | System Analyst | | | | | | |
| | | Accreditation of TPs and TCs | 1 | Consultant IT | | | 2 | FDA | 1 | Senior Programmer | | | | | | |
| | | PMKVY – CSSM Including Special projects with PMU of PMKVY | 1 | Admin Officer | | | 1 | Typist | 1 | Junior Programmer | | | | | | |
| | | | | | | | 1 | Group-D | 4 | Housekeeping / Security | | | | | | |
| | | | | | | | | | 3 | DEO / Assistants | | | | | | |
| | | | | | | | | | 3 | Driver | | | | | | |
| 4 | Executive Director – 3 In the cadre of Joint Director (To be redeployed from E&T) | Assessment and Certification | | | 1 | DGM of the cadre of DD | 1 | Office Superintendent | 4 | Project Managers | 1 | Anushaka (IT Asst.) | 1 | Director (DGM) MVCTMTSD | | |
| | | Market research and Design team for skilling | | | | | 2 | SDA | 3 | Program co-ordinator | 18 | SDA (6 in SM, others in Districts) | | | | |
| | | NAPS only for optional trades | | | | | 1 | FDA | 1 | Junior Programmer | 5 | Group - D | | | | |
| | | YES Centres | | | | | 1 | Typist | 1 | Career Counsellors | | | | | | |
| | | Training of Trainers | | | | | 1 | Group-D | 2 | DEO / Assistants | | | | | | |
| | | Kaushalya Shale | | | | | | | 4 | Housekeeping / Security | | | | | 1 | Co-ordinator |
| | | Mokshagundam Institute | | | | | | | 2 | Driver | | | | | 1 | Junior Asst |
| | | Vidyapeethas all other trainings | | | | | | | | | | | | | | |
| | | School and College Education for skilling | | | | | | | | | | | | | | |
| | Total | | 5 | | 4 | | 21 | | 52 | | 25 | | 1 | | 2 | |
| 5 | Joint Controller of Accounts | All payments for CMKKY, PMKVY and other programs | 1 | Joint Controller | | | 2 | Account Superintendents | 2 | Housekeeping / Security | | | | | | |
| | | | 2 | Asst. Controllers of Accounts | | | 2 | FDA | | | | | | | | |
| | | | | | | | 2 | SDA | | | | | | | | |
| | | | | | | | 1 | Stenographer | | | | | | | | |
| | | | | | | | 2 | Typists | | | | | | | | |
| | | | | | | | 3 | Group - D | | | | | | | | |
| | | | | | | | 1 | Driver | | | | | | | | |
| | | | 3 | | | | 13 | | | | | | | | | |

| | |
|---|---|
| Skill Mission | 25 |
| KVTSDC | 58 |
| Vidyapeethas | 25 |
| Mokshagundam | 1 |
| Kaushalya Shale | 2 |
| [illegible] | [illegible] |
| Total | [illegible] |